ಹುಕ್ಕೇರಿ ತಾಲ್ಲೂಕು ಕಣಗಲ ಗ್ರಾಮದಲ್ಲಿ ಮಂಜೂರಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ನಿರ್ಮಾಣದ ಬಗ್ಗೆ

೮೭೧ ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕಣಗಲ ಗ್ರಾಮದಲ್ಲಿ ಮಂಜೂರಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣಕ್ಕಾಗಿ ಜಮೀನು ಸ್ವಾಧೀನ ಪಡಿಸಿಕೊಳ್ಳಲು ತಡವಾಗುತ್ತಿರುವುದಕ್ಕೆ ಕಾರಣವೇನು ?

ಆ) ನಿರ್ಮಾಣಕ್ಕಾಗಿ ಬೇಕಾಗಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಇ) ಗಡಿ ಭಾಗದಲ್ಲಿರುವ ಈ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣಕ್ಕಾಗಿ ಊರ ಜನರಿಂದ ಕೊಟ್ಟಿರುವ ವಂತಿಗೆ ಹಣವೆಷ್ಟು ?

ಈ) ಜಮೀನು ಮಾಲಿಕರಿಗೆ ಕೊಡಬೇಕಾಗಿರುವ ಕಿಮ್ಮತ್ತಿನೊಂದಿಗೆ ಬಡ್ಡಿಯನ್ನು ಕೊಡುವುದು ಸಾರ್ವಜನಿಕರು ಇನ್ನೂ ಹೆಚ್ಚಿನ ವಂತಿಕೆ ಕೊಡುವುದು ಆಸಾಧ್ಯವಿರುವುದರಿಂದ ಜಿಲ್ಲಾಧಿಕಾರಿಗಳ ಕಡೆಗಿರುವ ಹೆಚ್ಚಿನ ಹಣದಲ್ಲಿ ಹಣವನ್ನು ಕೊಡಿಸಲು ಸರ್ಕಾರದವರು ತೆಗೆದುಕೊಳ್ಳುವ ಕ್ರಮವೇನು ?

ಉ) ನಿರ್ಮಾಣ ಕಾರ್ಯವನ್ನು ಆರಂಭಿಸುವ ನಿಗದಿತ ದಿನ ಯಾವುದು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿ, ಕಂಟುಂಬ ಕಲ್ಯಾಣ ಸಚಿವರು).—

ಅ) ಭೂ ಮಾಲೀಕರಿಗೆ ಕೊಡಬೇಕಾದ ಪೂರ್ತಿ ಹಣವನ್ನು ಪಂಚಾಯಿತಿಯವರು ತಡವಾಗಿ ಕೊಟ್ಟಿದ್ದರಿಂದ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ತಡವಾಗಿದೆ.

ಆ) ಕನಿಷ್ಟ ೪ ಎಕರೆಗಳು

ಇ) ೪೦,೮೪೭–೦೫ ರೂಪಾಯಿಗಳು

ಈ) ಈ ಭೂಮಿಯು ಇನ್ನೂ ಮಾಲೀಕರ ವಶದಲ್ಲಿಯೇ ಇರುವುದರಿಂದ ಬಡ್ಡಿಯನ್ನು ಕೊಡುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಉ) ಆದಷ್ಟು ಬೇಗನೆ.

ಶಿವಮೊಗ್ಗ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಇರುವ ನ್ಯಾಯ ಬೆಲೆ ಅಂಗಡಿಗಳ ಬಗ್ಗೆ

೧೦೪೪ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ ?

ಅ) ೧೯೮೪–೮೫ನೇ ಮತ್ತು ೮೫–೮೬ನೇ ಸಾಲುಗಳ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಇದ್ದ ನ್ಯಾಯ ಬೆಲೆ ಅಂಗಡಿಗಳೆಷ್ಟು ?

ಆ) ಹಸಿರು ಕಾರ್ಡ್ ವಿತರಣೆ ಆದ ನಂತರ ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಈ ಕಾರ್ಡು ಹೊಂದಿದವರಿಗೆ ಅಕ್ಕಿ ಬಿಡುಗಡೆ ಆಗಿರುವುದೆಷ್ಟು? ವಿತರಣೆ ಆಗದೆ ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿಗಳಲ್ಲಿ ಉಳಿದಿರುವ ಅಕ್ಕಿ ಎಷ್ಟು ?

ಶ್ರೀ ಜಿ. ಬಸವಣಪ್ಪ (ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ) ೧೯೮೪-೮೫ ಮತ್ತು ೮೫-೮೬ನೇ ಸಾಲುಗಳಲ್ಲಿ ಕೆಳಕಂಡ ನ್ಯಾಯಬೆಲೆ ಅಂಗಡಿಗಳು ಇರುತ್ತವೆ.

		೮೪-೮೫	೮೫-೮೬
೧	ಶಿವಮೊಗ್ಗ ಪಟ್ಟಣ ಪ್ರದೇಶ	೬೭	೬೮
೨	ಶಿವಮೊಗ್ಗ ಗ್ರಾಮಾಂತರ	೭೯	೫೨
೩	ಭದ್ರಾವತಿ ಪಟ್ಟಣ ಪ್ರದೇಶ	೪೯	೪೯
೪	ಭದ್ರಾವತಿ ಗ್ರಾಮಾಂತರ	೪೯	೪೩
೫	ಚನ್ನಗಿರಿ ತಾಲ್ಲೂಕು	೧೨೫	೮೩
೬	ಶಿಕಾರಿಪುರ ತಾಲ್ಲೂಕು	೧೦೩	೫೬
೭	ಸೊರಬ ತಾಲ್ಲೂಕು	೭೩	೪೭
೮	ಸಾಗರ ತಾಲ್ಲೂಕು	೩೯	೪೮
೯	ಹೊನ್ನಾಳಿ ತಾಲ್ಲೂಕು	೧೧೦	೬೧
೧೦	ಹೊಸನಗರ	೪೦	೪೬
೧೧	ತೀರ್ಥಹಳ್ಳಿ	೫೦	೫೩
	ಒಟ್ಟು	೭೮೪	೬೦೬

ಆ) ೮೫ನೇ ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ತಿಂಗಳಿಂ ಒಂದಕ್ಕೆ ಹಸಿರು ಕಾರ್ಡ್‌ದಾರರಿಗೆ ೨೨೪೧ ಮೆ. ಟನ್. ಅಕ್ಕಿಯನ್ನು ನ್ಯಾಯ ಬೆಲೆ ಅಂಗಡಿಗಳು ಬಿಡುಗಡೆ ಮಾಡಿವೆ.

ಕೆಲವು ಅಂಗಡಿಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ವಿತರಣೆ ಆಗದೆ ಇರುವ ಆಹಾರ ಪದಾರ್ಥಗಳು ಉಳಿದಿರುವ ಸಂದರ್ಭಗಳು ಉಂಟು.

ಇನ್ನಾ ಪ್ರಾಥಮಿಕ ಆರೋಗ್ಯ ಘಟಕದ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಗಳಿಗೆ ವಸತಿ ಸೌಕರ್ಯದ ಬಗ್ಗೆ

೩೫೩. ಶ್ರೀ ವಸಂತ ವಿ. ಸಾಲ್ಯಾನ (ಕಾಪು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಇನ್ನಾ ಪ್ರಾಥಮಿಕ ಆರೋಗ್ಯ ಘಟಕದ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಗಳಿಗೆ ವಸತಿ ಸೌಕರ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅವರಿಗೆ ಯಾವಾಗ ವಸತಿ ಸೌಕರ್ಯ ಒದಗಿಸಲಾಗುವುದು ?

ಇ) ಸದರಿ ಘಟಕದಲ್ಲಿ ವರ್ಗಾವಣೆಯಾದ ಸಹಾಯಕ ದಾದಿಯು ಸ್ಥಾನದಲ್ಲಿ ಬದಲಿ ನೇಮಕ ಮಾಡದಿರಲು ಕಾರಣವೇನು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿ, ಕುಟುಂಬ ಕಲ್ಯಾಣ ಸಚಿವರು).—

ಅ) ಬಂದಿದೆ.

ಆ) ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಂತಹಂತವಾಗಿ ವಸತಿಗೃಹಗಳನ್ನು ಕಟ್ಟಲಾಗುವುದು.

ಇ) ತರಬೇತಿ ಪಡೆದ ಸಹಾಯಕ ದಾದಿಯರ ಕೊರತೆಯಿಂದಾಗಿ.